

# ಒರೆಸುಂಡ್

## ನೀಲಸಮುದ್ರದ ಸುಂದರ ಸೇತು

**ಎರಡು ದೇಶಗಳ ನಡುವಿನ ಕಡಲಲ್ಲಿ ತೇಲುತ್ತಾ ನಿಂತಿರುವ 'ಒರೆಸುಂಡ್' ಸೇತುವೆ ದೇಶ–ದೇಶವನ್ನು ಸಂಪರ್ಕಿಸಿರುವ ಕೊಂಡಿ ಮಾತ್ರವಲ್ಲ, ರಸ್ತೆ ಹಾಗೂ ರೈಲು ಮಾರ್ಗ ಒಟ್ಟಿಗಿರುವ ಯೂರೋಪಿನ ಅತ್ಯಂತ ಉದ್ದದ ಮಾರ್ಗ ಎಂದೂ ಕರೆಸಿಕೊಂಡಿದೆ.**

**■ ಸುಚೇತಾ ಕೆ. ನಾರಾಯಣ್**

ಸ್ಕ್ಯಾಂಡಿನೇವಿಯಾ ಪೆನಿನ್ಸುಲ ಎಂದು ಕರೆಯಲಾಗುವ ಸ್ವೀಡನ್, ನಾರ್ವೆ ಮತ್ತು ಫಿನ್ಲೆಂಡ್ ದೇಶಗಳ ಗುಂಪಿನಿಂದ ಡೆನ್ಮಾರ್ಕ್ ದೇಶವನ್ನು ಬೇರ್ಪಡಿಸಿರುವುದು ಉತ್ತರ ಸಮುದ್ರವೆಂಬ ಅಗಾಧ ಜಲರಾಶಿ. ತೀರ ಇತ್ತೀಚಿನವರೆಗೂ ಡೆನ್ಮಾರ್ಕ್ ಶರಧಿಯಾಚೆಗಿನ ತನ್ನ ನೆರೆಯ ದೇಶಗಳೊಂದಿಗೆ ಸಂಪರ್ಕಕ್ಕಾಗಿ ಕೇವಲ ಜಲಮಾರ್ಗವನ್ನು ಅವಲಂಬಿಸಿತ್ತು.

ಈಗ್ಗೆ ಕೆಲ ವರ್ಷಗಳ ಹಿಂದೆ ಸ್ವೀಡನ್ ಹಾಗೂ ಡೆನ್ಮಾರ್ಕ್ ದೇಶಗಳು ಜಂಟಿಯಾಗಿ ಸಮುದ್ರಕ್ಕೆ ಸೇತುವೆ ಕಟ್ಟುವ ಸಾಹಸ ಕಾರ್ಯವನ್ನು ಕೈಗೊಂಡವು. ಅದರ ಫಲವೇ ಇಂದು ಕೆಲ ಕಿಲೋಮೀಟರ್‌ಗಳಷ್ಟು ಉದ್ದದ ಅಪೂರ್ವ ಸೇತುವೆಯೊಂದು ಎರಡು ದೇಶಗಳ ನಡುವೆ ನೀಲ ಸಮುದ್ರದ ಮಧ್ಯೆ ನಿಂತಿದೆ.

ಸ್ವೀಡನ್ ದೇಶದ ದಕ್ಷಿಣದಲ್ಲಿರುವ ಮಾಲ್ಮೊ ನಗರದಿಂದ ಡೆನ್ಮಾರ್ಕ್‌ನ ಅಮೇಗರ್ ದ್ವೀಪವನ್ನು ತಲುಪಲು ನಿರ್ಮಿತವಾಗಿರುವ ಈ ಸೇತುವೆಯ ಹೆಸರು 'ಒರೆಸುಂಡ್'. ಸಮೀಪದಿಂದ ನೋಡಿದಾಗ ತೀರ ಸರಳವೆನಿಸುವ ಈ ಸೇತುವೆಯ ಸೌಂದರ್ಯವನ್ನು ಮುಗಿಲೆತ್ತರದಿಂದಲೇ ಸವಿಯಬೇಕು. ಆಗಸದಿಂದ ನೋಡಿದರೆ ಅರ್ಧದಲ್ಲಿ ಜಲಸಮಾಧಿಯಾದಂತೆ ಕಾಣುವ ಇದು ಯಾವುದೋ ಕಡಲಾಳದಲ್ಲಿ ಹುದುಗಿರುವ ನಗರಿಗೆ ದಾರಿಯೇನೋ ಎಂದೆನಿಸುತ್ತದೆ.

ಸ್ವೀಡಿಶ್ ಕಡಲ ತಡಿಯಿಂದ ದೂರದ ಕೃತಕ ದ್ವೀಪ ಪೆಬರ್ ಹೋಲ್ಮ್‌ವರೆಗೂ ಸುಮಾರು ಎಂಟು ಕಿ.ಮೀ. ಉದ್ದದ ರೈಲು ಹಾಗೂ ರಸ್ತೆ ಮಾರ್ಗವಿದೆ. ಅಲ್ಲಿಂದ ಅಮೇಗರ್ ದ್ವೀಪದಲ್ಲಿರುವ ಕೋಪನ್‌ಹೇಗನ್ ಕ್ಯಾಸ್ಟ್ರುಪ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದವರೆಗೂ ಸುಮಾರು ನಾಲ್ಕು ಕಿ.ಮೀ. ಉದ್ದದ 'ಡ್ರಾಗ್ಡೆನ್ ಟನೆಲ್' ಎಂದು ಕರೆಯಲಾಗುವ ನೀರಿನಡಿಯಲ್ಲಿ ಕೊರೆದ ಸುರಂಗ ಮಾರ್ಗವಿದೆ. ಹೀಗಾಗಿ ಇದನ್ನು ಎತ್ತರದಿಂದ ನೋಡಿದಾಗ ಅರ್ಧಂಬರ್ಧ ಕಟ್ಟಿ ನಿಲ್ಲಿಸಿದಂತೆ ಭಾಸವಾಗುತ್ತದೆ. ಡ್ರಾಗ್ಡೆನ್ ಸುರಂಗ ಕೊರೆಯಲು ಅಂದುಕೊಂಡದ್ದಕ್ಕಿಂತ ಹೆಚ್ಚಿನ ವೆಚ್ಚ ತಗುಲಿದರೂ ಅಲ್ಲಿ ಓಡಾಡುವ ಹಡಗುಗಳು, ವಿಮಾನ ಸಂಚಾರಕ್ಕೆ ಇದರಿಂದ ಅನುಕೂಲವಾಗಿದೆ.

20ನೇ ಶತಮಾನದ ಪೂರ್ವಾರ್ಧದಲ್ಲಿಯೇ ಒರೆಸುಂಡ್ ಸೇತುವೆಯ ನಿರ್ಮಾಣದ ಯೋಜನೆ ಮಂಡಿಸಲಾಗಿತ್ತು. ನಂತರ ವಿಶ್ವಯುದ್ಧಗಳ ಕಾರಣ ಈ ಬೃಹತ್ ಯೋಜನೆಯನ್ನು ಕೈಬಿಡಲಾಯಿತು.

ಮುಂದೆ ಹಲವಾರು ಅಡೆತಡೆಗಳು ಎದುರಾಗಿ ಕಳೆದ ಶತಮಾನದ ಕೊನೆಯವರೆಗೂ ಇದರ ನಿರ್ಮಾಣ ಕನಸಾಗಿಯೇ ಉಳಿದಿತ್ತು. 1995ರಲ್ಲಿ ಸ್ವೀಡನ್ ಹಾಗೂ ಡೆನ್ಮಾರ್ಕ್ ದೇಶಗಳು ಒಟ್ಟಾಗಿ ಈ ಕೆಲಸಕ್ಕಾಗಿ ಕೈಜೋಡಿಸಿದವು. ಯೋರ್ಗೆನ್, ಕ್ಲಾಸ್, ನೀಲ್ಸ್ ಮತ್ತು ಜಾರ್ಜ್ ಎಂಬ ನಾಲ್ವರ ನೀಲಿನಕ್ಷೆಯ ಆಧಾರದ ಮೇಲೆ ಸೇತುವೆ ನಿರ್ಮಾಣದ ಕೈಂಕರ್ಯ ಪ್ರಾರಂಭವಾಯಿತು. ಸುಮಾರು 30 ಬಿಲಿಯನ್ ಡೇನಿಶ್ ಕ್ರೌನ್ಸ್‌ಗಳ ವೆಚ್ಚದಲ್ಲಿ ನೂರಾರು ಜನರ ಬೆವರಿನ ಫಲವಾಗಿ 1999 ಆಗಸ್ಟ್ 14ರಂದು ಒರೆಸುಂಡ್ ಸೇತುವಿನ ನಿರ್ಮಾಣ ಪೂರ್ಣಗೊಂಡಿತು. ಇದಕ್ಕೆ ಬಳಸಲಾದ ಹಣಕಾಸನ್ನು ಸುಂಕದ ರೂಪದಲ್ಲಿ ಬಳಕೆದಾರರಿಂದ ಹಿಂಪಡೆಯಲಾಗುತ್ತಿದೆ. ಇನ್ನು 30 ವರ್ಷಗಳಲ್ಲಿ ವ್ಯಯಿಸಿದ ಅಷ್ಟೂ ಹಣ ಮರುಪಾವತಿಯಾಗುವ ನಿರೀಕ್ಷೆ ಇದೆ.

ಇಂದು ಒರೆಸುಂಡ್ ಸೇತುವೆ ಹಲವರ ಕನಸಿಗೆ, ಶ್ರಮಕ್ಕೆ ಉತ್ತರವಾಗಿ ದೇಶ ದೇಶಗಳ ಜೋಡಿಸುವ ಕೊಂಡಿಯಾಗಿ ಎದೆಯುಬ್ಬಿಸಿ ನಿಂತಿದೆ. ರಸ್ತೆ ಹಾಗೂ ರೈಲು ಮಾರ್ಗ ಒಟ್ಟಿಗಿರುವ ಯೂರೋಪಿನ ಅತ್ಯಂತ ಉದ್ದದ ಮಾರ್ಗ ಇದು ಎಂಬ ಹೆಗ್ಗಳಿಕೆಗೆ ಗುರಿಯಾಗಿದೆ. 2002ರಲ್ಲಿ 'ಐಎಬಿಎಸ್‌ಇ' ಎಂಬ ಸಂಸ್ಥೆಯಿಂದ ಅಪರೂಪದ ರಚನೆ (outstanding structure) ಎಂಬ ಗೌರವಕ್ಕೆ ಒರೆಸುಂಡ್ ಪಾತ್ರವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in